

‘ನೀವು ಹಿಂದೂನಾ?’ ಅಪರಿಚಿತ ಸ್ಥಳದಲ್ಲಿ ಇಂತಹದೊಂದು ಪ್ರಶ್ನೆಯೇ? ಬಾಲಿಯ ವಿಮಾನ ನಿಲ್ದಾಣದಲ್ಲಿ ಕಾರಿಗಾಗಿ ಕಾಯುತ್ತಿರುವಾಗ, ಧುತ್ತೆಂದು ಕಾರಿನಿಂದಿಳಿದು ಪ್ರತ್ಯಕ್ಷನಾದ ವ್ಯಕ್ತಿಯೊಬ್ಬ ಪರಿಚಯ ಮಾಡಿಕೊಂಡ ಬೆನ್ನಿಗೇ ಕೇಳಿದ ಮೊದಲ ಅನಿರೀಕ್ಷಿತ ಪ್ರಶ್ನೆಯಿದು. ಭಾರತದಲ್ಲೆಂದೂ ಇಂತಹ ಪ್ರಶ್ನೆ ಎದುರಾಗಿರಲಿಲ್ಲವಾದ್ದರಿಂದ ಹೇಗೆ ಪ್ರತಿಕ್ರಿಯಿಸಬೇಕೆಂದು ಹೊಳೆಯದೇ ಗಲಿಬಿಲಿಯಾಗಿದ್ದು ನಿಜ. ನಾವು ಕಾರಿನಲ್ಲಿ ಕುಳಿತುಕೊಳ್ಳುತ್ತಿದ್ದಂತೆ ಮುಂದಿನ ಸೀಟಿನಲ್ಲಿ ಆಸೀನನಾಗುತ್ತಾ, ತಲೆ ತಿರುಗಿಸಿ, ‘ನಾನೂ ಹಿಂದೂ!’ ಎಂದು ನಕ್ಕವನ ನಿರಾಳ ಭಾವ ಸಟ್ಟನೇ ಅಪರಿಚಿತ ಸ್ಥಳದಲ್ಲಿ ಪರಿಚಿತ ಸೆಲೆಯೊಡೆದು ಆತ್ಮೀಯಭಾವ ಮೂಡಿಸಿಬಿಟ್ಟಿತ್ತು. ಅಲ್ಲಿರುವವರೆಗೂ ಇದೇ ಪುನರಾವೃತ್ತಿಯಾದಾಗ ಸಾಮ್ಯತೆಯ ಆಪ್ತತೆ ಅರ್ಥವಾಗುತ್ತಿದ್ದಂತೆ ಭಾರತೀಯರ ಬಗೆಗಿನ ಅಭಿಮಾನ ಮತ್ತು ಅಪಾರ ಗೌರವ ಕೂಡಾ ಸ್ಪಷ್ಟವಾಗುತ್ತಾ ಹೋಯಿತು.

ಭಾರತೀಯ ಸಿನಿಮಾ ಪ್ರಪಂಚದೆಲ್ಲೆಡೆ ಸಾಕಷ್ಟು ಪ್ರಭಾವ ಬೀರಿದೆ. ಬಾಲಿಯಲ್ಲೂ ಹಿಂದಿ ಸಿನಿಮಾಗಳನ್ನು ಬಾಲಿನೀಸ್ ಭಾಷೆಗೆ ಡಬ್ ಮಾಡಿ ಸ್ಥಳೀಯ ಚಾನಲ್‌ಗಳಲ್ಲಿ ತೋರಿಸುತ್ತಾರೆ. ಹಿಂದಿ ಹಾಡುಗಳಂತೂ ಬಾಲಿಯಲ್ಲಿ ಸಾಕಷ್ಟು ಜನಪ್ರಿಯ. ಬಾಲಿಯಲ್ಲಿ ಅನೇಕರು ಅಮಿತಾಭ್ ಬಚ್ಚನ್ ಹಾಗೂ ಶಾರೂಖ್ ಖಾನ್‌ರ ಕಟ್ಟಾ ಅಭಿಮಾನಿಗಳೆಂದು ಕಾರಿನ ಚಾಲಕ ಅರಿಯಿಂದ ತಿಳಿದ ವಿಷಯ.

## ವಿಲ್ಲಾಗಳೆಂಬ ಏಕಾಂತ ಸುಖ

ಬಾಲಿಯ ಉತ್ತರ ದಿಕ್ಕಿನ ಉಬುಡ್‌ನಲ್ಲಿರುವ ದುಸುನ್ ವಿಲ್ಲಾ, ವಿಸ್ತಾರವಾದ ಜಾಗದಲ್ಲಿ ಸುಂದರವಾದ ಉದ್ಯಾನವನದ ನಡುವೆ, ನಾಲ್ಕೈದು ಕಾಟೇಜ್ ಮಾದರಿಯಲ್ಲಿವೆ. ಬಾಲಿಯ ಸಾಂಪ್ರದಾಯಿಕ ವಾಸ್ತುಶಿಲ್ಪದ ಕೆತ್ತನೆಯುಳ್ಳ ಶಿಲ್ಪಗಳು, ತಾವರೆ ಕೊಳಗಳು, ಬಿದಿರಿನ ಮೆಳೆಗಳು, ಹೂಬಿಟ್ಟ ಬಣ್ಣದ ದೇವ ಕಣಿಗಿಲೆ ಮರಗಳು, ಆರ್ಕಿಡ್‌ಗಳಿಂದ ಮನೋಹರವಾಗಿದೆ. ತೋಟದ ನಡುವಿನಲ್ಲಿರುವ ದೊಡ್ಡ ಬಾಗಿಲು ತೆರೆದು ಒಳಗಡಿಯಿಟ್ಟರೆ ಶುಭ್ರ ನೀರಿನ ಈಜುಕೊಳ. ಸಂಪೂರ್ಣ ಏಕಾಂತವನ್ನು ದೃಷ್ಟಿಯಲ್ಲಿಟ್ಟುಕೊಂಡು ಕಟ್ಟಿರುವ ವಿಲ್ಲಾಗಳು, ಮುಖ್ಯ ರಸ್ತೆಯಿಂದ ಒಳಗಿದ್ದು ನಗರದೊಳಗಿದ್ದೂ ಹಳ್ಳಿಯಲ್ಲಿರುವ ಅನುಭವ ನೀಡುತ್ತವೆ. ಸಂಜೆಯಾಗುತ್ತಿದ್ದಂತೆ ಕೀಟ ಜಗತ್ತಿನ ಶಬ್ದಗಳು, ವಟರ್‌ಗುಟ್ಟುವ ಕಪ್ಪೆ, ಜೀರುಂಡೆಯ ಸದ್ದು, ತಿಳಿ ಬೆಳದಿಂಗಳಲ್ಲಿ ಮಿನುಗುವ ಈಜುಕೊಳದ ನೀರಿನಲ್ಲಿ ತೇಲಾಡುವ ಚಂದಿರ, ಗಾಳಿಗೆ ಉದುರುವ ಕಣಿಗಿಲೆ ಹೂವಿನ ಸಪ್ಪಳ ರೊಮ್ಯಾಂಟಿಕ್ ಮೂಡಿಗೆ ಸಹಜ ವೇದಿಕೆಯನ್ನು ಒದಗಿಸುವಂತಿವೆ. ಬಾಲಿಯ ಭೌಗೋಳಿಕ ಭೂದೃಶ್ಯ ಕರಾವಳಿಯಂತಿದೆ. ದಟ್ಟ ಕಾಡಿನೊಳಗೆ ಪ್ರವೇಶಿಸಿದಾಗ ಭಯಮಿಶ್ರಿತ ಅಪರಿಚಿತ ಭಾವವೊಂದು ಆವರಿಸಿಕೊಳ್ಳುವಂತೆ ನೀರವ ವಿಲ್ಲಾಗಳಲ್ಲಿರುವ ಕತ್ತಲ ಏಕಾಂತತೆಯೇ ಕೆಲವೊಮ್ಮೆ ಗಾಢವಾಗಿ ತಟ್ಟಿ ನಿಗೂಢವಾಗುವುದುಂಟು.